ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

TR010691415

ಸಂಖ್ಯೆ: ವಾತೆಜಂಆ(ಆ)/ಮೌತೆವಿ-01/ಎಸ್‌ಟಿಎಸ್.ಸಿಆರ್-29/12-13

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕಛೇರಿ,
(ಆಡಳಿತ) ಮೌಲ್ಯವರ್ಧಿತ ತೆರಿಗೆ ವಿಭಾಗ-1,
3ನೇ ಮಹಡಿ, ಟಿ.ಟಿ.ಎಂ.ಸಿ. ಬಿ.ಎಂ.ಟಿ.ಸಿ. ಕಟ್ಟಡ,
ಯಶವಂತಪುರ, ಬೆಂಗಳೂರು, ದಿ: 05-08-2014.
☎ 080-23570382, e-mail:jcctdvo1@gmail.com

## ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ

ವಿಷಯ: ಈ ವಿಭಾಗದಲ್ಲಿರುವ ನಿರುಪಯುಕ್ತ ವಾಹನಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: 1) ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ (ಉತ್ತರ), ಯಶವಂತಪುರ, ಬೆಂಗಳೂರು ಇವರ ತಪಾಸಣಾ ವರದಿ ದಿನಾಂಕ: 31-01-2014.

2) ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ಅನುಮತಿ ಪತ್ರ ಸಂಖ್ಯೆ: ವಿಹೆಚ್‌ಟಿ.ಸಿಆರ್-07/2013-14, ದಿನಾಂಕ: 04-04-2014.

No. 2454-14-15
D. 11-08-2014.

------- -------

ಸಾರ್ವಜನಿಕ ಮಾಹಿತಿಗಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಉಲ್ಲೇಖ (1) ಮತ್ತು (2)ರಂತೆ, 2 ಸರ್ಕಾರಿ ವಾಹನಗಳನ್ನು ಸಾರ್ವಜನಿಕರ ಹಿತಾಸಕ್ತಿಯಿಂದ ರಸ್ತೆಯ ಮೇಲೆ ಚಲಿಸಲು ಯೋಗ್ಯವಿಲ್ಲದೇ ಇರುವುದರಿಂದ ಸ್ಕ್ರ್ಯಾಪ್ ವಾಹನಗಳೆಂದು ಪರಿಗಣಿಸಿ, ಸದರಿ ವಾಹನಗಳನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು ಮೌಲ್ಯವರ್ಧಿತ ತೆರಿಗೆ ವಿಭಾಗ-01, ಬೆಂಗಳೂರು ಇವರಿಂದ ಬಹಿರಂಗ ಹರಾಜು ಮೂಲಕ ಪ್ರಸ್ತುತ ಇರುವ ಸ್ಥಿತಿಯಲ್ಲಿ (As in where is condition) ವಿಲೇವಾರಿ ಮಾಡಲಾಗುವುದೆಂದು ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಬಹಿರಂಗ ಹರಾಜನ್ನು ದಿನಾಂಕ: 19-08-2014 ರಂದು ಮಧ್ಯಾಹ್ನ 3:00 ಗಂಟೆಗೆ ನಿಗದಿಗೊಳಿಸಲಾಗಿದೆ. ಈ ಎರಡು ವಾಹನಗಳನ್ನು ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ) ಗಾಂಧಿನಗರ, ಬೆಂಗಳೂರು- 560 009 ಇಲ್ಲಿನ ವಾಹನ ನಿಲುಗಡೆ ಪ್ರದೇಶದಲ್ಲಿ ನಿಲ್ಲಿಸಲಾಗಿದೆ. ಈ ವಾಹನಗಳನ್ನು ಹರಾಜು ಮೂಲಕ ಪಡೆಯಲಿಚ್ಛಿಸುವವರು ಕಛೇರಿ ಕಾರ್ಯದ ವೇಳೆಯಲ್ಲಿ ವೀಕ್ಷಿಸಬಹುದಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತವೆ.

1) ಬಹಿರಂಗ ಹರಾಜು ದಿನಾಂಕ: 19-08-2014
2) ಹರಾಜು ಮಾಡುವ ಸ್ಥಳ: ವಾಹನ ನಿಲುಗಡೆ ಸ್ಥಳ ವಾಣಿಜ್ಯ ತೆರಿಗೆ ಆಯುಕ್ತರು, ಕರ್ನಾಟಕ ಗಾಂಧಿನಗರ ಬೆಂಗಳೂರು-560 009.

| ಕ್ರ.ಸಂ. | ವಾಹನದ ಹೆಸರು | ವಾಹನ ಸಂಖ್ಯೆ ಈ ಹಿಂದೆ ನೀಡಿದ್ದು ಪ್ರಸ್ತುತ ರದ್ದುಪಡಿಸಿದೆ. | ತಯಾರಿಕಾ ವರ್ಷ | ಇಂಧನ | ಹರಾಜು ಮಾಡಲು ನಿಗದಿಪಡಿಸಿದ ಕನಿಷ್ಠ ಮೌಲ್ಯ |
|---|---|---|---|---|---|
| 1 | ಟಾಟಾ ಸುಮೊ | ಕೆಎ 01 ಜಿ 3403 | 1999 | ಡೀಸಲ್ | ರೂ.35,000-00 |
| 2 | ಟಾಟಾ ಸುಮೊ | ಕೆಎ 04 ಜಿ 53 | 1999 | ಡೀಸಲ್ | ರೂ.38,000-00 |

**ನಿಬಂಧನೆಗಳು:**

1) ಮೇಲೆ ತಿಳಿಸಿರುವ ನಿರುಪಯುಕ್ತ ವಾಹನಗಳನ್ನು ಸಾರ್ವಜನಿಕರ ಹಿತಾಸಕ್ತಿಯಂತೆ ರಸ್ತೆಯ ಮೇಲೆ ಚಲಿಸಲು ಯೋಗ್ಯವಿರುವುದಿಲ್ಲವೆಂದು ವರದಿಯನ್ನು ನೀಡಿರುವುದರಿಂದ ಸದರಿ ವಾಹನಗಳನ್ನು ಸ್ಕ್ರಾಪ್ ವಾಹನಗಳೆಂದು ತೀರ್ಮಾನಿಸಿ, ಸಾರ್ವಜನಿಕ ಬಹಿರಂಗ ಹರಾಜು ಮೂಲಕ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಮೌಲ್ಯ ವರ್ಧಿತ ತೆರಿಗೆ ವಿಭಾಗ-1, ಯಶವಂತಪುರ ಬೆಂಗಳೂರು. ಇವರ ಸಮ್ಮುಖದಲ್ಲಿ ಅಥವಾ ಅವರು ನೇಮಿಸಿದ ಅಧಿಕಾರಿಗಳ ಸಮ್ಮುಖದಲ್ಲಿ ನಡೆಸಲಾಗುವುದು.

2) ವಾಹನವನ್ನು ಎಲ್ಲಿ ಹೇಗಿದೆಯೋ ಹಾಗೆ ಬಹಿರಂಗ ಹರಾಜು ನಡೆಸಲಾಗುವುದು.

3) ಈ ಹರಾಜಿನಲ್ಲಿ ಪಾಲ್ಗೊಳ್ಳಬಯಸುವವರು ದಿನಾಂಕ: 19-08-2014ರಂದು 3:00 ಘಂಟೆಯೊಳಗಾಗಿ ರೂ.5000/-ಗಳ ಠೇವಣಿ ಹಣವನ್ನು ಡಿ.ಡಿ.ಮುಖಾಂತರ ಈ ಕಛೇರಿಗೆ ಸಲ್ಲಿಸುವುದು.

4) ವಾಹನವನ್ನು ಸಂಬಂಧಿಸಿದ ಅಧಿಕಾರಿಗಳಿಂದ ಅನುಮೋದನೆ ಸಿಕ್ಕ ನಂತರ 15 ದಿನಗಳೊಳಗಾಗಿ ಪೂರ್ತಿ ಹಣವನ್ನು ಪಾವತಿ ಮಾಡಿ ನಂತರ ಸ್ವಂತ ಖರ್ಚಿನಲ್ಲಿ ಯಥಾಸ್ಥಿತಿಯಲ್ಲಿರುವ ಹಾಲಿ ಇರುವ ಜಾಗದಿಂದ 7 ದಿನಗಳೊಳಗಾಗಿ ಸಾಗಿಸಿಕೊಳ್ಳತಕ್ಕದ್ದು.

5) ವಾಹನವನ್ನು ಪರೀಕ್ಷಿಸಲು ಇಚ್ಛಿಸುವವರು ವಾಣಿಜ್ಯ ತೆರಿಗೆ ಆಯುಕ್ತರ ಕಛೇರಿ, ಗಾಂಧಿನಗರ ಬೆಂಗಳೂರು. ಇಲ್ಲಿ ವಾಹನ ನಿಲುಗಡೆ ಪ್ರದೇಶದಲ್ಲಿ ನಿಲ್ಲಿಸಿರುವ ವಾಹನಗಳನ್ನು ಕಛೇರಿಯ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 5-30 ಗಂಟೆಯೊಳಗೆ ಪರಿಶೀಲಿಸಬಹುದು.

6) ಹರಾಜಿನಲ್ಲಿ ಹಣ ಕಟ್ಟಿ ಯಶಸ್ವಿ ಆಗದವರಿಗೆ ಕಟ್ಟಿದ ಹಣವನ್ನು ಕೂಡಲೇ ಹಿಂತಿರುಗಿಸಲಾಗುವುದು.

7) ಬಹಿರಂಗ ಹರಾಜು ಮುಗಿದ ನಂತರ ಈ ಕಛೇರಿಯಿಂದ ಆದೇಶವನ್ನು ಸ್ವೀಕರಿಸಿದ 10 ದಿನಗಳೊಳಗಾಗಿ ಠೇವಣಿ ಹಣವನ್ನು ಬಿಟ್ಟು ಬಾಕಿ ಹಣವನ್ನು ಮತ್ತು ಶೇ.5ರಂತೆ ತೆರಿಗೆ ಸಹಿತ ಪಾವತಿಸಿ ನಂತರ ತಮ್ಮ ಸ್ವಂತ ಖರ್ಚಿನಲ್ಲಿ ವಾಹನವನ್ನು ಹಾಲಿ ಇರುವ ಜಾಗದಿಂದ 7 ದಿನಗಳೊಳಗಾಗಿ ಯಥಾ ಸ್ಥಿತಿಯಲ್ಲಿ ಸಾಗಿಸಿಕೊಳ್ಳತಕ್ಕದ್ದು.

8) ಹರಾಜಿನಲ್ಲಿ ವಿಲೇವಾರಿಯಾದ ವಾಹನವನ್ನು ನಿಗದಿತ ಅವಧಿಯೊಳಗೆ ಪೂರ್ತಿ ಹಣ ಕಟ್ಟಿ ಸ್ವಾಧೀನಕ್ಕೆ ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ ಪ್ರತಿ ದಿನಕ್ಕೆ ರೂ. 50-00 ನೆಲ ಬಾಡಿಗೆ ವಿಧಿಸಲಾಗುವುದು. ಮತ್ತು ತಿಂಗಳ ಒಳಗಾಗಿ ಪೂರ್ತಿ ಹಣ ಕಟ್ಟದಿದ್ದರೆ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಂಡು ವಾಹನವನ್ನು ಮರುಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

9) ಇಲಾಖಾ ಸಿಬ್ಬಂದಿಯವರು ಹರಾಜಿನಲ್ಲಿ ಭಾಗವಹಿಸಲು ಅರ್ಹರಲ್ಲ.

10) ಬಹಿರಂಗ ಹರಾಜಿನಲ್ಲಿ ಯಾವುದೇ ವಾದ ವಿವಾದಗಳಿಗೆ ಅವಕಾಶವಿರುವುದಿಲ್ಲ. ಯಾವುದೇ ತಕರಾರುಗಳಿಗೆ, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಮೌ.ತೆ.ವಿ-01, ಯಶವಂತಪುರ, ಬೆಂಗಳೂರು ಇವರ ತೀರ್ಮಾನವೇ ಅಂತಿಮ ಎಂದು ತಿಳಿಯುವುದು.

11) ಯಾವುದೇ ಸಂದರ್ಭದಲ್ಲಿಯೂ ಮಾರಾಟದ ಹರಾಜನ್ನು ಅಂಗೀಕರಿಸುವ, ತಿರಸ್ಕರಿಸುವ, ಮುಂದೂಡುವ, ರದ್ದುಪಡಿಸುವ ಎಲ್ಲಾ ಅಧಿಕಾರ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಮೌ.ತೆ.ವಿ-01, ಯಶವಂತಪುರ, ಬೆಂಗಳೂರು ಇವರಿಗೆ ಅಧಿಕಾರವಿರುತ್ತದೆ.

5/8/14

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ)
ಮೌ.ತೆ.ವಿ-1, ಬೆಂಗಳೂರು

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿ
ಮೌಲ್ಯವರ್ಧಿತ ತೆರಿಗೆ ವಿಭಾಗ-1
ಬೆಂಗಳೂರು - 560 022

ಪ್ರತಿಗಳು:-

1) ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ), ಇವರಿಗೆ ಮಾಹಿತಿಗಾಗಿ.
2) ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಡಿವಿಜ-2,3,4,5,6, ಜಾಗೃತಿ ಸದರಿ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
3) ವಾಣಿಜ್ಯ ತೆರಿಗೆ ಅಪರ ಆಯುಕ್ತರು (ಜಾರಿ), ಕೋರಮಂಗಲ, ಬೆಂಗಳೂರು.
4) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಉತ್ತರ), ಯಶವಂತಪುರ ಬೆಂಗಳೂರು ಇವರಿಗೆ ಮಾಹಿತಿಗಾಗಿ
5) ಸಾರ್ವಜನಿಕರ ಮಾಹಿತಿಗಾಗಿ ಸೂಚನಾ ಫಲಕಕ್ಕೆ
6) ಇಲಾಖಾ ವೆಬ್‌ಸೈಟ್‌ನಲ್ಲಿ ಸದರಿ ಪತ್ರವನ್ನು ಹಾಕಲು, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಗಣಕ ಕೇಂದ್ರ ಇವರಿಗೆ ಕಳುಹಿಸಲಾಗಿದೆ.
7) ಕಛೇರಿ ಕಡತಕ್ಕೆ.